ನಗರ ಡಿವೀರ್ಜ.

ನಗರ್ ಡಿವೀರ್ಜ ಡಿ॥ ಜಡ್ಜ್ರೀಯವರ ಕೋರ್ಟ್‌ನಲ್ಲಿ.

1885ನೇ ಇಸವಿ ದಿವಾಳಿ ಕೆಸ್ ನಂಬರ್ 47.

ದಿವಾಳಿಯಾದ ಡಿಕ್ರೀ ದೇಸೇದಾರ ಕೊಪ್ಪ ತಾಲ್ಲೂಕು ತ್ರಿಂಗೇರಿ ವಾಸಸ್ಥ ಪುಟ್ಟನ ವಿಷಯದಲ್ಲಿ—

ಈ ವಿಷಯವು ನಗರ ಡಿವೀರ್ಜ ಡಿಸ್ಟ್ರಿಕ್ಟ್ ಜಡ್ಜ್ರ್‌ಕೋರ್ಟು ರೂಬರೂ ದಿವಾಳಿಯಾದ ಪುಟ್ಟನ ಸಮಕ್ಷವದಲ್ಲಿಯೂ ಮತ್ತು ದಿವಾಳಿ ದಾರನ ಡಿಕ್ರೀ ಲೇಸೇದಾರರಾದ ಕೂತುಗೋಡು ತಿಂಗಳಭಟ್ಟನ ತರಫ್ ಅಡ್ವೋಕೆಟ್ ವೆಂ॥ ಕೇತೋರಾಯರ ಯದುವಾಗಿಯೂ ದರ್ಯಾಫ್ತೀ ಮೊಡಲ್ಪಟ್ಟಿತು.

ಇದೇ ವಿಷಯದಲ್ಲಿ ಸ್ನ 1885ನೇ ಇಸವಿ ಜುಲೈ 3ನೇ ತಾರೀಖಿನಲ್ಲಿ ಈ ಕೋರ್ಟ್‌ನಿಂದ ಮಾಡಲ್ಪಟ್ಟ ಹುಕ್ಕುಂ ಮೇರಿಗೆ ಪಟ್ಟಿಯಲ್ಲಿ ಕಂಡ ಯಾವ ಸಾಲಗಳಿಗೂ ಐಜ್ಞ ದಿವಾಳಿಯಾದವನ್ನ ದೇಹತಃ ಜವಾಬುದಾರಿಯಿಂದ ನಿಖಾಲಸ್ಯಾಡಿರುವದಲ್ಲದೆ ಆ ಬಗ್ಯೆ ಸದರೀ ಯವನ್ನ ವಸ್ತಗಿರೀ ಮಾಡಿ ಕೈದು ಮಾಡುವದರ ದೆಸೆಯಿಂದಲೂ ಬಿಡುಗಡೆಮಾಡಿ ಇರುವದಾಗಿ ಇದರಿಂದ ಹಕ್ಕುಂ ಮಾಡಲ್ಪಟ್ಟು ಇದೆ.

1885ನೇ ಇಸವಿ ಜುಲೈ 6ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತಖತ್ತೊಡನೆ ಕೊಡಲ್ಪಟ್ಟಿದೆ.

1885ನೇ ಇಸವಿ ಅರ್ಜೀ ನಂಬರ್ 57.

ವ್ಯತಪಟ್ಟ ಹೊಸವಕ್ಕಲ್ ತಿಮ್ಮಯ್ಯನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಹೊಸಕೊಕ್ಕಲ್ ಮಂಜಯ್ಯನ ಮಗ ಗಣಪ್ಪಯ್ಯ ವ್ಯತಪಟ್ಟ ಸದರೀ ತಿಂಮಯ್ಯನು ಅರ್ಜಿದಾರನಿಗೆ ದಾಯಾದಿ ದೊಡ್ಡಪ್ಪನು ಆಗಬೇಕೆಂಬ ಹಕ್ಕುದಾರೀ ಮೇಲೆ ನಾಗರ ತಾಲ್ಲೂಕು ಹೊಸಪಳ್ಳಿ ಸ್ಥಳದ ಗಣಪ್ಪಯ್ಯನು ಸದರೀ ಹೊಸಪಳ್ಳಿ ವಾಸಸ್ಥನಾಗಿ ವ್ಯತಪಟ್ಟ ತಿಮ್ಮಯ್ಯನ ಜಿಂದಗಿ ಬಗ್ಯಾಗಿ ಬರತಕ್ಕ 400 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ಯು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟ್‌ಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಗಣಪ್ಪಯ್ಯನ ಅರ್ಜೀಯನ್ನು 1885ನೇ ಇಸವಿ ಆಗಸ್ಟು ತಿಂಗಳು ತಾರೀಖು 24ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ವ್ಯತಪಟ್ಟ ತಿಮ್ಮಯ್ಯನ ಆಸ್ತಿಗೆ ಹಕ್ಕುದಾರರಾದ ವಿಃಪ್ಟರೂ ಈ ಕೋರ್ಟ್‌ನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1885ನೇ ಇಸವಿ ಇಸವಿ ಜುಲೈ ತಿಂಗಳು 14ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿ ನಮ್ಮ ದಸ್ತಖತ್ತೊಡನೆಕೊಡೋಣಾಗಿದೆ.

1885ನೇ ಇಸವಿ ಅರ್ಜೀ ನಂಬರ್ 61.

ವ್ಯತಪಟ್ಟ ಯಡೇಹಳ್ಳಿ ಡೆಪ್ಯುಟಿ ಅಮಲ್ದಾರ್ ಕಚೇರಿ ಹಿಡಿ ಗುಮಸ್ತನಾಗಿದ್ದ ಬಾಳಗಾರ ವೆಂಕಟರಾಯನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಶಿವಮೊಗ್ಗ ಡಿಸ್ಟ್ರಿಕ್ಟು ಡೆಪ್ಯೂಟಿ ಕಮ್ಮಿಷನರ ಆಫೀಸ್ 3ನೇ ಮುನಷಿ ಬಾಳಗಾರ ಭಾವ್ರೂರಾವ್, ವ್ಯತಪಟ್ಟ ಸದರೀ ಬಾಳಗಾರ ವೆಂಕಟರಾಯನಿಗೆ ತಮ್ಮನು ಆಗಬೇಕೆಂಬ ಹಕ್ಕುದಾರೀ ಮೇಲೆ ಶಿವಮೊಗ್ಗ ಸ್ಥಳದ ಬಾಳಗಾರ ಭಾವ್ರೂರಾವ್ ಯಡೆಹಳ್ಳಿ ವಾಸಸ್ಥನಾಗಿ ವ್ಯತಪಟ್ಟ ಬಾಳಗಾರ ವೆಂಕಟರಾಯನ ಜಿಂದಗಿ ಬಗ್ಯಾಗಿ ಬರತಕ್ಕ 200 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ಯು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟ್‌ಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಬಾಳಗಾರ ಭಾವ್ರೂರಾಯರ ಅರ್ಜೀಯನ್ನು 1885ನೇ ಇಸವಿ ಆಗಸ್ಟು ತಿಂಗಳು ತಾರೀಖು 20ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ವ್ಯತಪಟ್ಟ ಬಾಳಗಾರ ವೆಂಕಟರಾಯನ ಆಸ್ತಿಗೆ ಹಕ್ಕುದಾರರಾದ ವಿಸಿಪ್ಟರೂ ಈ ಕೋರ್ಟ್‌ನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1885ನೇ ಇಸವಿ ಜುಲೈ ತಿಂಗಳು 20ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮದಸ್ತಖತ್ತೊಡನೆ ಕೊಡೋಣಾಗಿದೆ.

1885ನೇ ಇಸವಿ ಅರ್ಜೀ ನಂಬರ್ 63.

ವ್ಯತಪಟ್ಟ ಚನ್ನಬಸಯ್ಯನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ರುದ್ರಯ್ಯನ ಮಗ ಜೊಮ್ಮಯ್ಯ, ವ್ಯತಪಟ್ಟ ಸದರೀ ಚನ್ನಬಸಯ್ಯನು ತನಿಗೆ ಖಾಸಾ ಚಿಕ್ಕಪ್ಪನು ಆಗಬೇಕೆಂಬ ಹಕ್ಕುದಾರಿ ಮೇಲೆ ನಾಗರ ತಾ॥ ಕರೂರು ನಾಡ್ ವಾಡ ಮಾಗಣಿ ಅವಡೆ ಗ್ರಾಮದ ಮಜರೆಗಿಂಡಿ ಕೊಪ್ಪದಲ್ಲಿರುವ ಜೊಮ್ಮಯನು,

ಸದರೀ ಗಿಂಡಿ ಕೊಪ್ಪದ ವಾಸಸ್ಥನಾಗಿ ಮೃತಪಟ್ಟ ಚನ್ನಬಸಯ್ಯನ ಜಿಂದಗಿ ಬಗ್ಯಾಗಿ ಬರತಕ್ಕ 200 ರೂಪಾಯಿಗಳ ಸಾಲಗಳನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಪಡಿಯತಕ್ಕ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಬೊಮ್ಮಯ್ಯನ ಅರ್ಜಿಯನ್ನು 1885ನೇ ಇಸವಿ ಆಗಸ್ಟ್ ತಿಂಗಳು ತಾರೀಖು 21ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯು ವಿಮರ್ಶೆ ಮಾಡಲ್ಪಡುತ್ತ. ಆ ಕಾಲದಲ್ಲಿ ಸದರೀ ಮೃತಪಟ್ಟ ಚನ್ನಬಸಯ್ಯನ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಇದರಿಂದ ತಿಳಿಯಪಡಿಸಿ ಇಧೆ.

1885ನೇ ಇಸವಿ ಜುಲೈ ತಿಂಗಳು 27ನೇ ತಾರೀಖಿನಲ್ಲಿ ಕೋರ್ಟು ಮೊಹರನಿನಿ ನಮ್ಮದಸ್ತಖತ್ತೊಡನೆ ಕೊಡೋಸಾಗಿಧೆ.

ಟಿ. ನರಹರಿರಾವ್, ಡಿಸ್ಟ್ರಿಕ್ಟ್ ಜಡ್ಜ್.

ಗವರ್ನ್‌ಮೆಂಟ್ ಗಾರಡ್ರ್ನ್ಸ್.

ನೋಟೀಸ್.

ತಾರೀಖು 13ನೇ ಜುಲೈ 1885.

ಇದರಿಂದ ಪ್ರಕಟಪಡಿಸುವದೇನಂದರೆ—ಸ್ಯ॥ 1885ನೇ ಇಸವಿ ಆಗಸ್ಟು 14ನೇ ಮುಕ್ಕಂ ಶುಕ್ರವಾರದಲ್ಲಿ ಎರಡನೇ ಸಲದ ಹಾರ್ಟಿಕಲ್ಚ್ಯುರಲ್ ಷೋ ಯೂನಿ ಫಲವುಪ್ಪಗಳನ್ನು ತೋರಿಸುವ ವಿನೋದವು ನಡಿಯುವದು.

ಇನಾಂ ಪಟ್ಟಿಗಳು ಸ್ವಲ್ಪ ದಿವಸಗಳೊಳಗಾಗಿ ಜನಗಳಿಗೆ ವ್ಯೆವಗಿಸಲ್ಪಡುವವು. ವಿಶೇಷ ವರ್ತಮಾನ ತಿಳಿಯಬೇಕಾಗಿದ್ದರೆ, ಇದರ ಡಿರುಜು ಮೂಡಿರುವರಲ್ಲಿ ಕೇಳತಕ್ಕದ್ದು.

ಜೆ. ಕ್ಯಾಮರ್ಕ್,
ಸೂಪರಿಟೆಂಡೆಂಟ್, ಗಿll ಗಾರಡ್ರ್ನ್ಸ್.

ಸ್ಯ॥ 1885ನೇ ಇಸವಿ ಮೇ ತಿಂಗಳ ಕಾಲಸ್ಥಿತಿ ರಿಪ್ರೋರ್ಟು.

ಬೆಂಗಳೂರು ಡಿಸ್ಟ್ರಿಕ್ಟು.

ಮಳೆ.—ನಾಲ್ಕು ಅಡಿ 50 ಸೆಂಟ್ಸ್ ಮಳೆ ಬೆಂಗಳೂರು ಹೆಡ್ ಕ್ವಾಟರಿನಲ್ಲಿ ಅಳಿಯಲ್ಪಟ್ಟಿರುತ್ತೆ. ಡಿಸ್ಟ್ರಿಕ್ಟ್ಯಾವುಳೆ ಸರಾಸರಿಯಾಗಿ ಎರಡೂ ಚಿಲ್ಲರೆ ಅಡಿ ಮಳೆ ಆಗಿ ಇರುತ್ತೆ.

ಫಸಲ್ ಸ್ಥಿತಿ.— ಫಸಲಿನಲ್ಲಿರುವ ಗನ್ನಾ ಮತ್ತು ಪುಣಜಿ ಭತ್ತ ಈ ಪೈರುಗಳು ವಳ್ಳೀ ಸ್ಥಿತಿಯಲ್ಲಿ ಇರುತ್ತೆ. ರಾಗಿ, ತೊಗರಿ ಅವರೆ, ಜೋಳ, ಗನ್ನಾ, ಪುಣಜಿಭತ್ತ ಮತ್ತು ಹಾರಕ ಇವು ಪೇರಾವಾಗಿರುತ್ತೆ. ಕ್ಲೋಸೇಟೆ ಮತ್ತು ಆನೆಕಲ್ ತಾಲ್ಲೂಕುಗಳಲ್ಲಿ ವೈಶಾಖಿ ಭತ್ತ ಕಟಾವಾಗಿರುತ್ತೆ.

ಜನಾರೋಗ್ಯ—ಸಾಧಾರಣವಾಗಿ ಚೆನ್ನಾಗಿ ಇಧೆ. ಜ್ಯೂ 17ನೇ ಮುಕ್ಕಂ ಲಾಗಾಯಿತು ಬೆಂಗಳೂರು ಷಹರಿನೊಳಗೆ ಆಸ್ಪತ್ರೆಜಾಲಾಜಿನಿಂದ 43 ಜನ ಮೃತಪಟ್ಟಿರುತ್ತಾರೆ.

ಜನಮರಣ—ಮೇ ತಿಂಗಳಲ್ಲಿ 661 ಮಂದಿ, ಅದರ ಹಿಂದಿನ ತಿಂಗಳಲ್ಲಿ 590 ಮಂದಿ ಈ ಮೇರೆ ಹೋಗಿರುತ್ತಾರೆ. ಆದ್ದರಿಂದ ಮೇ ತಿಂಗಳಲ್ಲಿ 71 ಜಾಸ್ತಿ.

ಕಾಲ್ನಡೆ.—ಹಿಂದಿನ ತಿಂಗಳಲ್ಲಿ 4,323 ಕಾಲ್ನಡೆ ಹೋಗಿದ್ದದ್ದಕ್ಕೆ ಈ ತಿಂಗಳಲ್ಲಿ 3,266 ಕಾಲ್ನಡೆಗಳು ಹೋಗಿರುತ್ತೆ. ಆ ಪೈಕಿ 219 ಕಾಲ್ನಡೆಗಳು ದುಷ್ಟ ಮೃಗಗಳಿಂದ ಕೊಲ್ಲಲ್ಪಟ್ಟವೆ.

ಜಮ್ಮಾ—5,552—13—7—ರೂಪಾಯಿ ಕಂದಾಯವುಳ್ಳ ಜಮ್ಮಾ ಸಾಗುವಳೀ ಬಗ್ಯೆ ತೆಗದುಕೊಳ್ಳಲ್ಪಟ್ಟಿಧೆ. ಪರಂತು ರಾಜೀನಾಮೆ ಏನೂ ಇಲ್ಲವು.

ಎಲ್. ರಿಕೆಟ್ಸ್,
ಡೆಪ್ಯೂಟಿ ಕಮ್ಮಿಷನರ.